# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| 1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 35 (360) |
| 2. ಮಾನ್ಯ ಸದಸ್ಯರ ಹೆಸರು | ಶ್ರೀ ಕೆ. ಗೋವಿಂದರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3. ಉತ್ತರಿಸಬೇಕಾದ ದಿನಾಂಕ | 12/12/2018 |
| 4. ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th><th>Answer</th></tr>
<tr><td>ಅ)</td><td>ಕಾರ್ಮಿಕರ ಕಲ್ಯಾಣ ಕಾರ್ಯಗಳಿಗೆ ವಿನಿಯೋಗ ವಾಗಬೇಕಿದ್ದ ರೂ.450 ಕೋಟಿ ಹಣ ಆದಾಯ ತೆರಿಗೆ ಇಲಾಖೆಯ ಪಾಲಾಗಿರುವುದರಿಂದ ಕಾರ್ಮಿಕರ ಕಲ್ಯಾಣ ನಿಧಿಗೆ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಹೌದು, ಆದಾಯ ತೆರಿಗೆ ಇಲಾಖೆಯು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಸಂಗ್ರಹವಾಗಿದ್ದ ವಾರ್ಷಿಕ ಕಲ್ಯಾಣ ಸುಂಕ ರೂ.413.08 ಕೋಟಿ ಮೊತ್ತವನ್ನು ಆದಾಯ ತೆರಿಗೆಯೆಂದು ತಪ್ಪಾಗಿ ಗ್ರಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ, ಆದಾಗ್ಯೂ ಮಂಡಳಿಯು ಕೂಡಲೇ ಸೂಕ್ತ ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಿ ಸದರಿ ಮೊತ್ತವನ್ನು ವಾಪಸ್ಸು ಪಡೆಯಲು ಕಾನೂನು ಕ್ರಮ ಕೈಗೊಂಡಿರುವುದರಿಂದ ಮಂಡಳಿಗೆ ನಷ್ಟ ಉಂಟಾದಂತಾಗಿರುವುದಿಲ್ಲ.</td><td>Yes, it has come to the knowledge of the Government that Income Tax Department has wrongly categorised the annual cess inflow of the Board and has attached Rs. 413.08 crore as income tax. However, the Board has immediately filed an appeal before the appropriate authority and is taking legal action to recover the said amount hence there is no loss to the Board.</td></tr>
<tr><td>ಆ)</td><td>ಕಾರ್ಮಿಕರ ಭದ್ರತೆ ಮತ್ತು ಕಲ್ಯಾಣ ಕಾರ್ಯಕ್ರಮಕ್ಕೆ ಸಂಗ್ರಹಿಸಿದ ಹಣವನ್ನು ಸರಿಯಾಗಿ ನಿರ್ವಹಿಸದೆ ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳುವುದೇ;</td><td>ಮಂಡಳಿಯು ಕಾನೂನಿನ ಚೌಕಟ್ಟಿನಲ್ಲಿ ಹಾಗು ಕಾರ್ಮಿಕರ ಕಲ್ಯಾಣದ ಹಿತದೃಷ್ಟಿಯಿಂದ ಕಳೆದ 05ವರ್ಷಗಳಲ್ಲಿ ಕಲ್ಯಾಣ ಸುಂಕದ ನಿಧಿಯಿಂದ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಈ ಕೆಳಗಿನ ಪಟ್ಟಿಯಲ್ಲಿ ತೋರಿಸಿರುವಂತೆ ಖರ್ಚು ಮಾಡಿರುತ್ತದೆ.<br>(ಮೊತ್ತ ರೂ.ಕೋಟಿಗಳಲ್ಲಿ)
<table>
<tr><th></th><th>2007-13</th><th>2013-2018 ಮಾರ್ಚ್</th><th>2018 ಏಪ್ರಿಲ್ ರಿಂದ 2018 ನವೆಂಬರ್</th></tr>
<tr><td>ಸುಂಕ</td><td>1606.93</td><td>3237.24</td><td>549.19</td></tr>
<tr><td>ಕಲ್ಯಾಣ ವೆಚ್ಚ</td><td>8.95</td><td>348.34</td><td>123.65</td></tr>
</table></td><td>The Board has been spending welfare cess fund for the purpose of welfare and social security programmes appropriately within the frame work of law and with commitment to labour welfare in the last 05 years as can be seen in the following Table<br>(Amt in Crores)
<table>
<tr><th></th><th>2007-13</th><th>2013-2018 March</th></tr>
</table></td></tr>
</table>

<table>
<tr>
<td></td>
<td></td>
<td>
<table>
<tr><td>ನೋಂದಾಯಿತ ಫಲಾನುಭವಿಗಳ ಸಂಖ್ಯೆ</td><td>2007-13</td><td>2013-2018 ಮಾರ್ಚ್</td><td>2018 ಏಪ್ರಿಲ್ ರಿಂದ 2018 ನವೆಂಬರ್</td></tr>
<tr><td></td><td>3,04,370</td><td>9,87,088</td><td>6,62,982</td></tr>
</table>
</td>
<td>
<table>
<tr><td>Cess</td><td>1606.93</td><td>3237.24</td></tr>
<tr><td>Welfare Expenditure</td><td>8.95</td><td>348.34</td></tr>
</table>
<table>
<tr><td>Registration of beneficiaries</td><td>2007-13</td><td>2013-2018 March</td></tr>
<tr><td></td><td>3,04,370</td><td>9,87,088</td></tr>
</table>
</td>
</tr>
<tr>
<td>ಇ)</td>
<td>ಕಾರ್ಮಿಕರ ಕಲ್ಯಾಣ ನಿಧಿಯಿಂದ ಕಾರ್ಮಿಕರಿಗೆ 4000 ಮನೆಗಳನ್ನು ನಿರ್ಮಿಸುವ ಯೋಜನೆ ಪ್ರಸ್ತುತ ಯಾವ ಹಂತದಲ್ಲಿದೆ?</td>
<td>ಕಾರ್ಮಿಕರ ಕಲ್ಯಾಣ ನಿಧಿಯಿಂದ ಕಾರ್ಮಿಕರಿಗೆ 4,000 ಮನೆಗಳನ್ನು ನಿರ್ಮಿಸುವ ಯೋಜನೆ ಮಂಡಳಿಯಲ್ಲಿ ಇರುವುದಿಲ್ಲ. ಬದಲಾಗಿ ವಸತಿ ಸೌಲಭ್ಯ (ಗೃಹ ಭಾಗ್ಯ) ಯೋಜನೆಯಡಿ ನೋಂದಾಯಿತ ಕಾರ್ಮಿಕರು ಯಾವುದಾದರೂ ಸರ್ಕಾರದ ಸಮೂಹ ವಸತಿ ಯೋಜನೆಯಡಿ ಫಲಾನುಭವಿಯಾಗಿ ಗುರುತಿಸಲ್ಪಟಿರಬೇಕು. ಅಂತಹ ಪ್ರಕರಣಗಳಲ್ಲಿ ಗರಿಷ್ಠ ರೂ.2.00 ಲಕ್ಷಗಳ ಮಿತಿಗೆ ಒಳಪಟ್ಟು ಅರ್ಹ ಮುಂಗಡ ಹಣವನ್ನು ಪ್ರಸ್ತುತ ಜಾರಿಯಲ್ಲಿರುವ ವಸತಿ ಯೋಜನೆಯನ್ನು ಕಾರ್ಯಗತಗೊಳಿಸುವ ಸರ್ಕಾರದ ಇಲಾಖೆ / ಸಂಸ್ಥೆಗೆ ನೇರವಾಗಿ ಹಣವನ್ನು ಮುಂಗಡವಾಗಿ ನೀಡಲಾಗುತ್ತದೆ.</td>
<td>There is no scheme in relation to construction of 4000 houses for the workers from the welfare cess fund. Instead, the registered workers should be identified as beneficiaries under any of the Government Housing Schemes. In such cases, the eligible amount subject to a limit of Rs.2.00 lakhs will be paid directly to the concerned Government Department / Institution executing the existing housing scheme as advance.</td>
</tr>
</table>

**ಸಂಖ್ಯೆ: ಕಾಇ 424 ಎಲ್‌ಇಟಿ 2018**

(ವೆಂಕಟರಮಣಪ್ಪ)
ಕಾರ್ಮಿಕ ಸಚಿವರು

ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ. ಗೋವಿಂದರಾಜ್ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 360 ಕ್ಕೆ

## ಪೂರಕ ಟಿಪ್ಪಣಿ

- ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ಆರ್ಥಿಕ ವರ್ಷ 2014–15 (ತೆರಿಗೆ ನಿರ್ಧರಣ ವರ್ಷ 2015–16) ಕ್ಕೆ ಆದಾಯ ತೆರಿಗೆ ರಿಟರ್ನ್ ಅನ್ನು ದಿನಾಂಕ: 13–03–2017 ರಂದು ಸಲ್ಲಿಸಲಾಗಿತ್ತು.
- ಸದರಿ ಆದಾಯ ತೆರಿಗೆ ರಿಟರ್ನ್‌ಅನ್ನು ಆದಾಯ ತೆರಿಗೆ ಇಲಾಖೆಯವರು ಕೂಲಂಕುಶವಾಗಿ ಪರಿಶೀಲನೆ ಮಾಡಿ ತೆರಿಗೆ ನಿರ್ಧರಿಸಲು ದಿನಾಂಕ: 18–09–2017 ನೋಟೀಸನ್ನು ಮಂಡಳಿಗೆ ಜಾರಿಗೊಳಿಸಿದರು.
- ಸದರಿ ನೋಟೀಸ್‌ಗೆ ಸಂಬಂಧಿಸಿದಂತೆ ಆದಾಯ ತೆರಿಗೆ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಮಂಡಳಿಯ ಸಿ.ಎ ಮುಖಾಂತರ ಸಲ್ಲಿಸಿ ಫಾರಂ ನಂ. 10 ನ್ನು ಸಲ್ಲಿಸುವಲ್ಲಿ ವಿಳಂಬವಾದುದಕ್ಕೆ ವಿಳಂಬ ಮಾಫಿ ಮಾಡಿ, ಸೆಸ್ ಮೊತ್ತವನ್ನು ಆದಾಯ ತೆರಿಗೆಯಿಂದ ವಿನಾಯಿತಿ ನೀಡಲು ಮಂಡಳಿಯಿಂದ ಮನವಿ ಮಾಡಿಕೊಳ್ಳಲಾಗಿತ್ತು.
- ಆದಾಯ ತೆರಿಗೆ ಇಲಾಖೆಯವರು ಮಂಡಳಿಯು ಸಲ್ಲಿಸಿದ ದಾಖಲಾತಿ ಹಾಗೂ ಮನವಿಯನ್ನು ಪರಿಗಣಿಸದೆ ದಿನಾಂಕ: 29–12–2017 ರಂದು ತೆರಿಗೆ ನಿರ್ಧರಣ ಆದೇಶವನ್ನು ಪೂರ್ಣಗೊಳಿಸಿ ರೂ.413.08 ಕೋಟಿಯನ್ನು ಪಾವತಿಸುವಂತೆ ಮಂಡಳಿಗೆ ನೋಟಿಸ್ ಜಾರಿಮಾಡಿದ್ದರು.
- ತತ್ಸಂಬಂಧ ಮಂಡಳಿಯು ಆದಾಯ ತೆರಿಗೆಯಿಂದ ವಿನಾಯಿತಿ ಪಡೆಯಲು ಮಾಡಿದ ಪ್ರಯತ್ನಗಳೆಲ್ಲಾ ವಿಫಲವಾಗಿರುತ್ತವೆ. ಆದಾಯ ತೆರಿಗೆ ಇಲಾಖೆಯವರು ದಿನಾಂಕ: 28–02–2018 ರಂದು ಅಟ್ಯಾಚ್‌ಮೆಂಟ್ ಆದೇಶವನ್ನು ಜಾರಿಗೊಳಿಸಿ ಬ್ಯಾಂಕ್ ಖಾತೆಯಿಂದ ಅಷ್ಟೂ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡಿರುತ್ತಾರೆ.
- ಈ ಸಂಬಂಧ ಮಂಡಳಿಯು ಆದಾಯ ತೆರಿಗೆ ಪರಿಣಿತ ವಕೀಲರನ್ನು ನೇಮಿಸಿಕೊಂಡು ಆಯುಕ್ತರು, ಆದಾಯ ತೆರಿಗೆ (ಮೇಲ್ಮನವಿ), ಬೆಂಗಳೂರು ಇವರಿಗೆ ಮೇಲ್ಮನವಿ ಸಲ್ಲಿಸಿರುತ್ತದೆ. ಈ ಪ್ರಕರಣವು ದಿನಾಂಕ: 18–12–2018 ಕ್ಕೆ ವಿಚಾರಣೆಗಾಗಿ ನಿಗಧಿಯಾಗಿರುತ್ತದೆ.
- ಮುಂದುವರೆದು, ಸಿಬಿಡಿಟಿ, ನವದೆಹಲಿ ಇವರ ಸುತ್ತೋಲೆ ದಿನಾಂಕ: 31–07–2017 ರಂತೆ ನಿಧರಿಸಿದ ತೆರಿಗೆ ಮೊತ್ತದಲ್ಲಿ ಶೇ.20 ರಷ್ಟು ತೆರಿಗೆಯನ್ನು ಮಾತ್ರ ಮಂಡಳಿಯಿಂದ ವಸೂಲಿ ಮಾಡಬೇಕಾಗಿತ್ತು. ಆದರೆ, ಪೂರ್ಣ ತೆರಿಗೆಯನ್ನು ವಸೂಲಿ ಮಾಡಿರುವುದರಿಂದ ತೆರಿಗೆ ನಿರ್ಧರಣ ಆದೇಶವನ್ನು ಪರಿಷ್ಕರಣೆ ಮಾಡಿ, ಹೆಚ್ಚಿಗೆ ವಸೂಲಿ ಮಾಡಿರುವ ಅಂದರೆ ಶೇ.80ರಷ್ಟು ತೆರಿಗೆ ಮೊತ್ತವನ್ನು ಮಂಡಳಿಗೆ ಮರುಪಾವತಿ ಮಾಡಲು ಆದಾಯ ತೆರಿಗೆ ಅಧಿಕಾರಿಗಳಿಗೆ ದಿನಾಂಕ: 11–09–2018 ರಂದು ಅರ್ಜಿ ಸಲ್ಲಿಸಲಾಗಿದು ಆದಾಯ ತೆರಿಗೆ ಇಲಾಖೆಯ ಮುಂದಿನ ಆದೇಶದ ನಿರೀಕ್ಷಣೆಯಲ್ಲಿರುತ್ತದೆ.

ಮಂಡಳಿಯಲ್ಲಿ ನೋಂದಾಯಿತರಾದ ಫಲಾನುಭವಿಗಳಿಗೆ 15 ವಿವಿಧ ರೀತಿಯ ಕಲ್ಯಾಣ ಮತ್ತು ಸಾಮಾಜಿಕಭದ್ರತಾ ಆರ್ಥಿಕ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಅವುಗಳ ವಿವರ ಈ ಕೆಳಗಿನಂತಿದೆ.

## ಫಲಾನುಭವಿಗಳಿಗೆ ಸಿಗುವ ಸೌಲಭ್ಯಗಳು

1. ಪಿಂಚಣಿ ಸೌಲಭ್ಯ: ಮೂರು ವರ್ಷ ಸದಸ್ಯತ್ವದೊಂದಿಗೆ 60 ವರ್ಷ ಪೂರೈಸಿದ ಫಲಾನುಭವಿಗೆ ಮಾಸಿಕ ರೂ.1,000/-
2. ದುರ್ಬಲತೆ ಪಿಂಚಣಿ: ಫಲಾನುಭವಿಗೆ ಖಾಯಿಲೆಗಳಿಂದ ಹಾಗೂ ಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ/ಭಾಗಶಃ ಅಂಗವಿಕಲತೆ ಹೊಂದಿದ್ದರೆ ಮಾಸಿಕ ರೂ.1,000/- ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ ರೂ. **2,00,000/-**ದವರೆಗೆ ಅನುಗ್ರಹ ರಾಶಿ ಸಹಾಯಧನ.
3. ಟ್ರೈನಿಂಗ್-ಕಮ್-ಟೂಲ್‌ಕಿಟ್ ಸೌಲಭ್ಯ (ಶ್ರಮ ಸಾಮರ್ಥ್ಯ) : ರೂ.20,000/-ವರೆಗೆ
4. ವಸತಿ ಸೌಲಭ್ಯ (ಕಾರ್ಮಿಕ ಗೃಹ ಭಾಗ್ಯ): ರೂ.2,00,000/-ದವರೆಗೆ ಮುಂಗಡ ಸೌಲಭ್ಯ
5. ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀ ಬಾಂಡ್): ಮಹಿಳಾ ಫಲಾನುಭವಿಯ ಮೊದಲ ಎರಡು ಮಕ್ಕಳಿಗೆ ಹೆಣ್ಣು ಮಗುವಿನ ಜನನಕ್ಕೆ ರೂ. **30,000/-** ಮತ್ತು ಗಂಡು ಮಗುವಿನ ಜನನಕ್ಕೆ **ರೂ.20,000/-**
6. ಅಂತ್ಯಕ್ರಿಯೆ ವೆಚ್ಚ : **ರೂ.4,000/-** ಹಾಗೂ ಎಕ್ಸ್‌ಗ್ರೇಷಿಯಾ **ರೂ.50,000/-**ಸಹಾಯಧನ
7. ಶೈಕ್ಷಣಿಕ ಸಹಾಯಧನ (ಕಲಿಕೆ ಭಾಗ್ಯ): ಫಲಾನುಭವಿಯ ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ:
   - i) 1, 2 ಹಾಗೂ 3ನೇ ತರಗತಿಯಲ್ಲಿ ಉತ್ತೀರ್ಣರಾದವರಿಗೆ ರೂ. **2,000/-**
   - ii) 4, 5 ಹಾಗೂ 6ನೇ ತರಗತಿಯಲ್ಲಿ ಉತ್ತೀರ್ಣರಾದವರಿಗೆ ರೂ. **3,000/-**
   - iii) 7 ಹಾಗೂ 8ನೇ ತರಗತಿ ಉತ್ತೀರ್ಣರಾದವರಿಗೆ ರೂ. **4,000/-**
   - iv) 9, 10 ನೇ ತರಗತಿ ಹಾಗೂ ಪ್ರಥಮ ಪಿಯುಸಿಉತ್ತೀರ್ಣರಾದವರಿಗೆ **6,000/-**
   - v) ದ್ವಿತೀಯ ಪಿ.ಯು.ಸಿ ಉತ್ತೀರ್ಣರಾದವರಿಗೆ ರೂ. **8,000/-**
   - vi) ಐಟಿಐ ಮತ್ತು ಡಿಪ್ಲೋಮಾ ಉತ್ತೀರ್ಣರಾದವರಿಗೆ ಪ್ರತಿ ವರ್ಷಕ್ಕೆ ರೂ. **7,000/-**
   - vii) ಪದವಿ ಉತ್ತೀರ್ಣರಾದವರಿಗೆ ಪ್ರತಿ ವರ್ಷಕ್ಕೆ ರೂ. **10,000/-**
   - viii) ಸ್ನಾತಕೋತ್ತರ ಪದವಿ ಸೇರ್ಪಡೆಗೆ ರೂ. **20,000/-** ಹಾಗೂ ಪ್ರತಿ ವರ್ಷ **ರೂ.10,000/-**ಗಳಂತೆ (ಎರಡು ವರ್ಷಗಳಿಗೆ)
   - ix) ಇಂಜಿನಿಯರಿಂಗ್ ಕೋರ್ಸ್‌ಗೆ ಸೇರ್ಪಡೆಗೆ **ರೂ.25,000/-** ಹಾಗೂ ಪ್ರತಿ ವರ್ಷ ತೇರ್ಗಡೆಗೆ **ರೂ.20,000/-**
   - x) ವೈದ್ಯಕೀಯ ಕೋರ್ಸ್‌ಗೆ ಸೇರ್ಪಡೆಗೆ **ರೂ.30,000/-** ಹಾಗೂ ಪ್ರತಿ ವರ್ಷ ತೇರ್ಗಡೆಗೆ **ರೂ.25,000/-**
   - xi) ಪಿಹೆಚ್‌ಡಿ ಕೋರ್ಸ್‌ಗೆ ಪ್ರತಿ ವರ್ಷಕ್ಕೆ **ರೂ.20,000/-** (ಗರಿಷ್ಠ ಎರಡು ವರ್ಷಗಳು) ಮತ್ತು ಪಿಹೆಚ್‌ಡಿ ಪ್ರಬಂಧ ಸ್ವೀಕಾರದ ನಂತರ ಹೆಚ್ಚುವರಿಯಾಗಿ **ರೂ.20,000/-**

ಪ್ರತಿಭಾವಂತ ಮಕ್ಕಳಿಗಾಗಿ:

(a) ಎಸ್.ಎಸ್‌ಎಲ್.ಸಿ ಅಥವಾ ತತ್ಸಮಾನ ತರಗತಿಯಲ್ಲಿ ಶೇ.75 ಅಂಕ ಪಡೆದವರಿಗೆ **ರೂ.5,000/-**

(b) ಪಿಯುಸಿ ಅಥವಾ ತತ್ಸಮಾನ ತರಗತಿಯಲ್ಲಿ ಶೇ.75 ಅಂಕ ಪಡೆದವರಿಗೆ **ರೂ.7,000/-**

(c) ಪದವಿ ಅಥವಾ ತತ್ಸಮಾನ ಕೋರ್ಸ್‌ನಲ್ಲಿ ಶೇ.75 ಅಂಕ ಪಡೆದವರಿಗೆ **ರೂ.10,000/-**

(d) ಸ್ನಾತಕೋತ್ತರ ಪದವಿ ಅಥವಾ ತತ್ಸಮಾನ ಕೋರ್ಸ್‌ನಲ್ಲಿ ಶೇ.75 ಅಂಕ ಪಡೆದವರಿಗೆ ರೂ.15,000/-

8. ವೈದ್ಯಕೀಯ ಸಹಾಯಧನ (ಕಾರ್ಮಿಕ ಆರೋಗ್ಯ ಭಾಗ್ಯ): ನೋಂದಾಯಿತ ಫಲಾನುಭವಿ ಹಾಗೂ ಅವರ ಅವಲಂಭಿತರಿಗೆ ರೂ.300/- ರಿಂದ ರೂ.10,000/-ವರೆಗೆ
9. ಅಪಘಾತ ಪರಿಹಾರ: ಮರಣ ಹೊಂದಿದ್ದಲ್ಲಿ ರೂ.5,00,000/-, ಸಂಪೂರ್ಣ ಶಾಶ್ವತ ದುರ್ಬಲತೆಯಾದಲ್ಲಿ ರೂ. 2,00,000/- ಮತ್ತು ಭಾಗಶಃ ಶಾಶ್ವತ ದುರ್ಬಲತೆಯಾದಲ್ಲಿ ರೂ.1,00,000/-
10. ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕ ಚಿಕಿತ್ಸಾ ಭಾಗ್ಯ): ಹೃದ್ರೋಗ, ಕಿಡ್ನಿ ಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮ ಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದ ತೊಂದರೆಗೆ ಸಂಬಂಧಿತ ಚಿಕಿತ್ಸೆ, ಮೂತ್ರ ಪಿಂಡದಲ್ಲಿನ ಕಲ್ಲು ತೆಗೆಯುವ ಚಿಕಿತ್ಸೆ, ಮೆದುಳಿನ ರಕ್ತಸ್ರಾವದ ಚಿಕಿತ್ಸೆ, ಅಲ್ಸರ್ ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿ ಶಸ್ತ್ರಚಿಕಿತ್ಸೆ, ಇ.ಎನ್.ಟಿ. ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯೂಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ಡಿಸ್‌ಲೊಕೇಶನ್ ಚಿಕಿತ್ಸೆ, ಸಾಮಾನ್ಯ ಶಸ್ತ್ರಚಿಕಿತ್ಸೆಗಳಿಗೆ ರೂ.2,00,000/-ವರೆಗೆ
11. ಮದುವೆ ಸಹಾಯಧನ (ಗೃಹ ಲಕ್ಷ್ಮೀ ಬಾಂಡ್): ಫಲಾನುಭವಿ ಅಥವಾ ಅವರ ಇಬ್ಬರು ಮಕ್ಕಳ ಮದುವೆಗೆ ತಲಾ ರೂ.50,000/-
12. LPG ಸಂಪರ್ಕ ಸೌಲಭ್ಯ (ಕಾರ್ಮಿಕ ಅನಿಲ ಭಾಗ್ಯ): ಅನಿಲ ಸಂಪರ್ಕದೊಂದಿಗೆ ಎರಡು ಬರ್ನರ್ ಸ್ಟೌವ್
13. ಬಿಎಂಟಿಸಿ ಬಸ್ ಪಾಸ್ ಸೌಲಭ್ಯ: ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವಂತಹ / ವಾಸಸ್ಥಳದಿಂದ ಬೆಂಗಳೂರಿಗೆ ಪ್ರಯಾಣಿಸುವ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ
14. ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ಸೌಲಭ್ಯ: ರಾಜ್ಯದಾದ್ಯಂತ ವಿದ್ಯಾಭ್ಯಾಸದಲ್ಲಿ ತೊಡಗಿರುವ ನೋಂದಾಯಿತ ಕಾರ್ಮಿಕರ ಇಬ್ಬರು ಮಕ್ಕಳಿಗೆ
15. ತಾಯಿ ಮಗು ಸಹಾಯ ಹಸ್ತ: ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿ ಆಕೆಯ ಮಗುವಿನ ಶಾಲಾ ಪೂರ್ವ ಶಿಕ್ಷಣ ಮತ್ತು ಪೌಷ್ಟಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕ ರೂ.6,000/-ಗಳ ಸಹಾಯಧನ

ಮಂಡಳಿಯ ನೋಂದಾಯಿತ ಫಲಾನುಭವಿಗಳಿಗೆ ಮತ್ತು ಅವರ ಅವಲಂಭಿತರಿಗೆ ಮಂಡಳಿಯ ವತಿಯಿಂದ 15 ವಿವಿಧ ರೀತಿಯ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ನೀಡಲಾಗುತ್ತಿದ್ದು, 2007 ರಿಂದ ನವೆಂಬರ್ 2018 ರವರೆಗೆ 3,46,793 ನೋಂದಾಯಿತ ಫಲಾನುಭವಿಗಳಿಗೆ ರೂ.480.19 ಕೋಟಿ ಮೊತ್ತದ ಸಹಾಯಧನ ಬಿಡುಗಡೆ ಮಾಡಲಾಗಿರುತ್ತದೆ. ವರ್ಷವಾರು ವಿವರವನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.

## ಅನುಬಂಧ-1

### 2007 ರಿಂದ ನವೆಂಬರ್ 2018 ರವರೆಗೆ ವಿತರಿಸಲಾದ ಸೌಲಭ್ಯಗಳ ವರ್ಷವಾರು ವಿವರ

| ಸೌಲಭ್ಯಗಳ ವಿವರ | 2007-08 ರಿಂದ 2012-13ರವರೆಗೆ | | 2013 -2014 | | 2014-15 | | 2015-16 | | 2016-17 | | 2017-18 | | 2018-19 | | ಒಟ್ಟು | |
|---|---|---|---|---|---|---|---|---|---|---|---|---|---|---|---|---|
| | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| ಶೈಕ್ಷಣಿಕ ಧನಸಹಾಯ | 10,896 | 27,679,600 | 7,830 | 24,008,535 | 19,943 | 78,126,135 | 40,048 | 177,492,706 | 80,412 | 373,781,879 | 79,256 | 384,717,037 | 58,867 | 330,996,360 | 297,252 | 139,68,02,25 |
| ಮದುವೆ ಧನಸಹಾಯ | 2,126 | 15,160,000 | 320 | 5,915,000 | 1616 | 79,360,000 | 3,638 | 179,340,000 | 8,488 | 424,200,000 | 9,452 | 472,600,000 | 6,602 | 320,600,000 | 32,242 | 149,71,75,00 |
| ಅಂತ್ಯ ಸಂಸ್ಕಾರಕ್ಕೆ ವೆಚ್ಚ | 1,376 | 20,921,000 | 853 | 33,038,000 | 493 | 24,683,000 | 990 | 52,898,367 | 1854 | 100,440,252 | 2,178 | 117,395,000 | 1,452 | 76,293,850 | 9,196 | 42,56,69,46 |
| ಪ್ರಮುಖ ವೈದ್ಯಕೀಯ | 233 | 8,104,269 | 64 | 1,717,123 | 300 | 8,098,044 | 508 | 16,171,872 | 704 | 17,573,710 | 696 | 20,421,791 | 402 | 9,072,118 | 2,907 | 8,11,58,92 |
| ಅಪಘಾತದಿಂದ ಮರಣ/ಶಾಶ್ವತ ದುರ್ಬಲತೆ | 195 | 14,777,740 | 25 | 2,670,000 | 19 | 2,682,248 | 34 | 3,180,012 | 51 | 7,094,000 | 56 | 9,948,000 | 41 | 9,326,000 | 421 | 4,96,78,00 |
| ಹೆರಿಗೆ ಧನಸಹಾಯ | 365 | 2,192,000 | 92 | 1,101,000 | 225 | 3,244,500 | 350 | 5,235,000 | 543 | 8,136,000 | 467 | 7,005,000 | 354 | 5,515,000 | 2,396 | 3,24,28,50 |
| ವೈದ್ಯಕೀಯ ಚಿಕಿತ್ಸೆಗೆ ನೀಡಿದ ವೆಚ್ಚ | 779 | 742,750 | 103 | 75,450 | 54 | 79,756 | 30 | 46,451 | 37 | 82,891 | 44 | 280,500 | 178 | 4,949,536 | 1,225 | 62,57,33 |
| ಉಪಕರಣ ಖರೀದಿಗೆ ಸಾಲ | 3 | 14,890 | 0 | 0 | 11 | 55,000 | 5 | 25,000 | 1 | 5000 | 0 | 0 | 0 | 0 | 20 | 99,89 |
| ಪಿಂಚಣಿ ಸೌಲಭ್ಯ | 0 | 0 | 0 | 0 | 0 | 0 | 0 | 0 | 413 | 2,778,000 | 343 | 6,353,000 | 360 | 7,356,000 | 1,119 | 1,64,87,00 |
| ದುರ್ಬಲತೆ ಪಿಂಚಣಿ | 0 | 0 | 0 | 0 | 0 | 0 | 0 | 0 | 5 | 731,000 | 6 | 877,000 | 4 | 688,000 | 15 | 22,96,00 |
| ಕ್ಲೈಂ ಅರ್ಜಿಗಳ ವಿಲೇವಾರಿಗಾಗಿ ಪ್ರಾಧಿಕಾರಿಗಳಿಗೆ ಬಿಡುಗಡೆ ಮಾಡಲಾದ ಮೊತ್ತ | | | | | | | | | | | | 0 | 0 | 400,008,078 | 0 | 40,00,08,07 |
| ಅನಿಲ ಭಾಗ್ಯ | ಈ ಯೋಜನೆಯನ್ನು 2017-18ನೇ ಸಾಲಿನಲ್ಲಿ ಚಾಲ್ತಿಗೆ ತಂದಿರುವ ಪ್ರಯುಕ್ತ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಉಚಿತ ಎಲ್‌ಪಿಜಿ ಸೌಲಭ್ಯ, ಗ್ಯಾಸ್ ಸ್ಟೋವ್ ಮತ್ತು ರಿಫೀಲ್ ಸೌಲಭ್ಯ ಒದಗಿಸಲು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಗೆ ಮುಂಗಡ ಹಣವನ್ನು ಬಿಡುಗಡೆ ಮಾಡಲಾಗಿದೆ | | | | | | | | | | | 66,00,00,000 | 0 | 0 | 0 | 66,00,00,00 |
| ಶ್ರಮ ಸಾಮರ್ಥ್ಯ ಯೋಜನೆ | ಟ್ರೈನಿಂಗ್-ಕಮ್-ಟೂಲ್‌ಕಿಟ್ (ಶ್ರಮ ಸಾಮರ್ಥ್ಯ) ಯೋಜನೆಯನ್ನು ಪ್ರಸ್ತುತ 2017-18ನೇ ಸಾಲಿನಲ್ಲಿ ಪ್ರಾರಂಭ ಮಾಡಿದ್ದು, ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಮತ್ತು ಅವರ ಅವಲಂಭಿತರಿಗೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳ ಆಯ್ದ ವೃತ್ತಿಗಳಲ್ಲಿ ಕೌಶಲ್ಯ ತರಬೇತಿ, ಟೂಲ್‌ಕಿಟ್, ಸೇಫ್ಟಿ ಕಿಟ್, ವೇತನ ನಷ್ಟ, ಪ್ರಮಾಣ ಪತ್ರ ಮುಂತಾದ ಸೌಲಭ್ಯಗಳನ್ನು ಒದಗಿಸಲು ವಸತಿ ಇಲಾಖೆಯ ಕಾರ್ನಿಕ್ ಸಂಸ್ಥೆಗೆ ಮುಂಗಡ ಹಣವನ್ನು ನೀಡಲಾಗಿರುತ್ತದೆ. | | | | | | | | | | | 8,39,95,481 | 0 | 47,093,930 | 0 | 13,10,89,41 |
| ಬಿಎಂಟಿಸಿ ಬಸ್‌ಪಾಸ್ ಸೌಲಭ್ಯ | ಬೆಂಗಳೂರಿನ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ವಾಸ ಸ್ಥಳದಿಂದ ಕಾರ್ಯ ಸ್ಥಳಕ್ಕೆ ಪ್ರಯಾಣಿಸಲು ಉಚಿತ ಬಿಎಂಟಿಸಿ ಸೌಲಭ್ಯವನ್ನು ಒದಗಿಸುವ ದಿಶೆಯಲ್ಲಿ ಬಿಎಂಟಿಸಿ ಸಂಸ್ಥೆಗೆ 2017-18ನೇ ಸಾಲಿನಲ್ಲಿ ಮುಂಗಡ ಹಣವನ್ನು ನೀಡಲಾಗಿರುತ್ತದೆ. | | | | | | | | | | | 5,24,79,000 | 0 | 0 | 0 | 5,24,79,00 |
| MGNREGA ಕಾರ್ಮಿಕರು ಮತ್ತು ಇತರರ ವಿಶೇಷ ನೋಂದಣೆ ಅಭಿಯಾನ | 2017-18ನೇ ಸಾಲಿನಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಯಗಳಲ್ಲಿ ತೊಡಗಿರುವ MGNREGA ಕಾರ್ಮಿಕರು ಮತ್ತು ಇತರರ ವಿಶೇಷ ನೋಂದಣಿ ಅಭಿಯಾನ ಮತ್ತು ಸ್ಮಾರ್ಟ್ ಕಾರ್ಡ್ ವಿತರಣೆಯನ್ನು ಕೈಗೊಂಡಿರುವ ಕಿಯೋನಿಕ್ಸ್ ಸಂಸ್ಥೆಗೆ ಭರಿಸಿರುವ ಮೊತ್ತ | | | | | | | | | | | 33,289,686 | 0 | 24,602,043 | 0 | 5,78,91,72 |